# ಜಗಮೊಂಡ ಇಶಾನ್... ದಾಖಲೆಗಳ ಶಾನ್

ಓದು–ಬರಹಕ್ಕಿಂತ ಕ್ರಿಕೆಟ್ಟೇ ತನಗೆ ಮುಖ್ಯ ಎಂದು ಭಾವಿಸಿ ಬೆಳೆದ ಬಿಹಾರದ ಹುಡುಗ ಈಗ ಏಕದಿನ ಪಂದ್ಯದಲ್ಲಿ ಹಲವು ದಾಖಲೆಗಳನ್ನು ನಿರ್ಮಿಸಿ, ಮುಖದ ತುಂಬಾ ನಗುತ್ತಿದ್ದಾನೆ. ಆತನ ಬೆಳವಣಿಗೆ ಆಸಕ್ತಿಕರ.

■ ವಿಶಾಖ ಎನ್.




200ರ ಗಡಿ ದಾಟಿ ಆಕಾಶದತ್ತ ರಕ್ಕೆ ಜಿಗಿತ...

**ವೇಗದ ದ್ವಿಶತಕ ಎಸೆತ 126, 200 ರನ್**

1998ರ ಜುಲೈನಲ್ಲಿ ಸಿಂಗರ್–ಅಕೈ ನಿದಾಹಸ್ ಟ್ರೋಫಿಯನ್ನು ಶ್ರೀಲಂಕಾ ವಿರುದ್ಧ ಭಾರತ ಗೆದ್ದಿದ್ದು ನೆನಪು. ಆ ಟೂರ್ನಿಯ ಫೈನಲ್‌ನಲ್ಲಿ ಸಚಿನ್ ತೆಂಡೂಲ್ಕರ್ ಪಂದ್ಯ ಪುರುಷೋತ್ತಮ. ಸೌರವ್ ಗಂಗೂಲಿ ಕೂಡ ಆ ಪಂದ್ಯದಲ್ಲಿ ಶತಕದಾಟ ಆಡಿದ್ದರು. ಶ್ರೀಲಂಕಾದ ಅರವಿಂದ ಡಿಸಿಲ್ವ ಭರ್ಜರಿ ಫಾರ್ಮ್‌ನಲ್ಲಿದ್ದ ಸಂದರ್ಭ. ಸರಣಿ ಸರ್ವೋತ್ತಮ ಪ್ರಶಸ್ತಿಗೆ ಭಾಜನರಾಗಿದ್ದ ಅವರೂ ಫೈನಲ್‌ನಲ್ಲಿ ಶತಕ ಗಳಿಸಿ, ಭಾರತದ ಬೌಲರ್‌ಗಳ ಬೆವರಿಳಿಸಿದ್ದರು. ಬರೀ ಏಳು ರನ್‌ಗಳಿಂದ ಶ್ರೀಲಂಕಾ ಆ ಪಂದ್ಯವನ್ನು ಸೋತಿತ್ತು. ಇಶಾನ್ ಕಿಶನ್ ಎಂಬ ಈ ಹೊತ್ತಿನ 'ಸೆನ್ಸೇಷನ್' ಕ್ರಿಕೆಟಿಗ ಹುಟ್ಟಿದ್ದೂ ಅದೇ ವರ್ಷದ ಅದೇ ತಿಂಗಳು.

ಏಕದಿನ ಕ್ರಿಕೆಟ್ ಪಂದ್ಯದ ಇತಿಹಾಸದಲ್ಲಿಯೇ ಅತಿ ವೇಗದ ದ್ವಿಶತಕ ಗಳಿಸಿದ ದಾಖಲೆಯನ್ನು ಬಿಹಾರದ ಪಟ್ನಾದ ಹುಡುಗ ಇಶಾನ್ ಬರೆದರು. ಅವರ ಆಟವನ್ನು ಕೊಂಡಾಡಿದ ದಿಗ್ಗಜರಲ್ಲಿ ಸಚಿನ್ ತೆಂಡೂಲ್ಕರ್ ಕೂಡ ಒಬ್ಬರು.

1990ರ ದಶಕದಲ್ಲಿ ಜಯಸೂರ್ಯ ಕಬ್ಬಿಣದಂಥ ಕೈಗಳಿಂದ ಬ್ಯಾಟ್ ಬೀಸುತ್ತಿದ್ದ ಪರಿಯನ್ನು ಕಂಡು ಎಡಗೈ ಬ್ಯಾಟ್ಸ್‌ಮನ್ ವೈಭವ ಎಂದರೆ ಹೀಗಿರಬೇಕು ಎಂದುಕೊಂಡಿದ್ದೆವು. ಸೌರವ್ ಗಂಗೂಲಿ ಸ್ಪಿನ್ನರ್‌ಗಳಿಗೆ ಕ್ರೀಸ್‌ನಿಂದ ಆಚೆಬಂದು, ಸಿಕ್ಸರ್ ಎತ್ತುತ್ತಿದ್ದ ರಸಾನುಭವವನ್ನು ಕಣ್ಣಿಗಿಳಿಸಿಕೊಂಡಿದ್ದೆವು. ಬಾಂಗ್ಲಾದೇಶದ ಎದುರು ಕೊನೆಯ ಏಕದಿನ ಪಂದ್ಯದಲ್ಲಿ ಇಶಾನ್ ಆಡಿದ ಇನಿಂಗ್ಸ್‌ನಲ್ಲಿ ಹಲವು ದಾಖಲೆಗಳು ಕಾಣಸಿಕ್ಕವು. ಜಯಸೂರ್ಯ ಹಾಗೂ ಗಂಗೂಲಿ ಶೈಲಿಗೆ ಹೊರತಾದಂಥ ಆಕ್ರಮಣಕಾರಿ ಧೋರಣೆ ಈ ಹುಡುಗನಲ್ಲಿ ಇರುವುದಂತೂ ಸ್ಪಷ್ಟವಾಯಿತು.

ಕ್ರಿಸ್ ಗೇಲ್ 138 ಎಸೆತಗಳಲ್ಲಿ ಜಿಂಬಾಬ್ವೆ ವಿರುದ್ಧ 2015ರ ವಿಶ್ವಕಪ್ ಪಂದ್ಯದಲ್ಲಿ 138 ಎಸೆತಗಳಲ್ಲಿ ದ್ವಿಶತಕ ಗಳಿಸಿದ್ದೇ ಇದುವರೆಗಿನ ಅತಿ ವೇಗದ ದ್ವಿಶತಕ ಎನಿಸಿಕೊಂಡಿತ್ತು. ಅದನ್ನು ಇಶಾನ್ ಪುಡಿಗಟ್ಟಿ, 126 ಎಸೆತಗಳಲ್ಲೆ ದ್ವಿಶತಕದ ಗಡಿ ದಾಟಿದರು. ಬಾಂಗ್ಲಾದೇಶದ ಎದುರು ಭಾರತದ ವೀರೇಂದ್ರ ಸೆಹ್ವಾಗ್ 175 ರನ್ ಗಳಿಸಿದ್ದೇ ಇದುವರೆಗೆ ಆ ತಂಡದ ಎದುರಿನ ವೈಯಕ್ತಿಕ ಗರಿಷ್ಠ ಮೊತ್ತವೆನಿಸಿಕೊಂಡಿತ್ತು. ಅದನ್ನೂ ಇಶಾನ್ ಮುರಿದುಹಾಕಿದರು. ಇದಕ್ಕೆ ಅವರು ತೆಗೆದುಕೊಂಡಿದ್ದು ತಾವಾಡಿದ ಒಂಬತ್ತನೇ ಇನಿಂಗ್ಸ್ ಅಷ್ಟೆ. 24 ವರ್ಷ 145 ದಿನದ ಪ್ರಾಯದಲ್ಲಿ ಇಶಾನ್ ಇಂಥದೊಂದು ಸಾಧನೆ ಮಾಡಿದ್ದರಿಂದ, ವಿಶ್ವದಲ್ಲೇ ದ್ವಿಶತಕ ಗಳಿಸಿದ ಅತಿ ಕಿರಿಯ ಎಂಬ ದಾಖಲೆಯನ್ನೂ ಬರೆಯಲಾಯಿತು. ಇದಷ್ಟೇ ಅಲ್ಲ, ಬಾಂಗ್ಲಾದೇಶದ ವಿರುದ್ಧ ಸೌರವ್ ಗಂಗೂಲಿ ಏಕದಿನ ಪಂದ್ಯವೊಂದರಲ್ಲಿ ಏಳು ಸಿಕ್ಸರ್ ಸಿಡಿಸಿದ್ದೇ ಆ ತಂಡದ ಎದುರಿನ